**ಓ ಎಸ್ 87/2024 ಡಿಡಬ್ಲ್ಯೂ2**

**ಸಾಕ್ಷಿಯನ್ನು ದಿಃ 10.08.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಎಸ್ ಕೆ ವಕೀಲರಿಂದಃ**

ದಾವಾ ಷೆಡ್ಯೂಲ್ 2 ನೇ ಐಟಂ ಸ್ವತ್ತಿನ ಪೂರ್ವಕ್ಕೆ ದಾವಾ ಷೆಡ್ಯೂಲ್ 1 ನೇ ಐಟಂ ಸ್ವತ್ತು ಬರುತ್ತದೆ. ನಿಶಾನೆ ಪಿ 3 ರಲ್ಲಿರುವ ಸ್ವತ್ತು ನಾವು ಕ್ರಯಕ್ಕೆ ಪಡೆದಿರುವ ಸ್ವತ್ತು. ನಿಶಾನೆ ಪಿ 2 ರಲ್ಲಿರುವ ಸ್ವತ್ತು ಅದೇ ದಿನ ಕ್ರಯವಾಗಿರುವ ಮತ್ತೊಂದು ಸ್ವತ್ತಾಗಿರುತ್ತದೆ. ನಿಶಾನೆ ಪಿ 2 ರಲ್ಲಿರುವ ಸ್ವತ್ತು 1 ನೇ ಪ್ರತಿವಾದಿ ಹೆಸರಿನಲ್ಲಿದೆ. ಸದರಿ ದಾಖಲೆ ಮತ್ತು ಹಳೆಯ ಇತರೆ ದಾಖಲೆಗಳನ್ನು ಪರಿಶೀಲನೆ ಮಾಡಿ ನಾನು ಕ್ರಯಕ್ಕೆ ಪಡೆದುಕೊಂಡೆ. ದಾವಾ ಷೆಡ್ಯೂಲ್ ಐಟಂ ನಂ. 1 ನ್ನು 8 ನೇ ಪ್ರತಿವಾದಿ ಕ್ರಯಕ್ಕೆ ಪಡೆದುಕೊಂಡಿದ್ದಾರೆ. ನನಗೆ ಮತ್ತು 8 ನೇ ಪ್ರತಿವಾದಿಗೆ 1 ರಿಂದ 5 ನೇ ಪ್ರತಿವಾದಿಗಳು ಒಂದೇ ರೀತಿಯ ದಾಖಲೆಯನ್ನು ಒದಗಿಸಿದ್ದರು. ನಾನು ಕ್ರಯಕ್ಕೆ ಪಡೆದ ಸ್ವತ್ತಿನ ಪೂರ್ವ ದಿಕ್ಕಿನ ಸ್ವತ್ತಿನ ದಾಖಲೆಗಳನ್ನು ನಾನು ಪರಿಶೀಲಿಸಿದೆ. ನಿಶಾನೆ ಪಿ 2 ರ ಪ್ರಕಾರ ಸದರಿ ಸ್ವತ್ತಿನಲ್ಲಿ ವಾಸ ಯೋಗ್ಯ ಮನೆ ಇದೆ ಎಂದು ನಮೂದು ಆಗಿದೆ ಎಂದರೆ ಸರಿ. ನನ್ನ ಹಾಗೂ 8 ನೇ ಪ್ರತಿವಾದಿಯ ಕ್ರಯಪತ್ರಗಳಲ್ಲಿ ಸ್ವತ್ತುಗಳನ್ನು ಖಾಲಿ ನಿವೇಶನ ಎಂದು ಬರೆಸಲಾಗಿದೆ. ಅಸೆಸ್ ಮೆಂಟ್ ರಿಜಿಸ್ಟರ್ ನಲ್ಲಿ ಏನು ಬರೆದಿರುತ್ತದೆಯೋ ಅದೇ ಪ್ರಕಾರ ನೋಂದಣಿ ಶುಲ್ಕ ಪಾವತಿಸಬೇಕು ಎಂದರೆ ಸರಿ. ನೋಂದಣಿ ಶುಲ್ಕವನ್ನು ಕಡಿಮೆ ಪಾವತಿ ಮಾಡುವ ಸಲುವಾಗಿ ವಾಸ ಯೋಗ್ಯ ಮನೆ ಇದ್ದರೂ ಸಹ ಖಾಲಿ ನಿವೇಶನ ಎಂದು ನೋಂದಣಿ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ವಾಸ ಯೋಗ್ಯ ಮನೆ ಇರುವ ಕಾರಣ ನಿಶಾನೆ ಪಿ 2 ನ್ನು ಸರಿಪಡಿಸಿಕೊಳ್ಳುವಂತೆ ನಾವು ಹೇಳಿದೆವು. ಅಲ್ಲಿ ಈಗಲೂ ಸಹ ವಾಸ ಯೋಗ್ಯ ಮನೆ ಇದ್ದರೂ ಸಹ ಖಾಲಿ ನಿವೇಶನ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2015 ರವರೆಗೆ ವಾಸ ಯೋಗ್ಯ ಮನೆ ಇತ್ತು ಎಂದು 1 ರಿಂದ 5 ನೇ ಪ್ರತಿವಾದಿಗಳು

ತಿಳಿಸಿದ್ದರು. ಆ ಮನೆಗೆ ವಿದ್ಯುತ್ ಸಂಪರ್ಕ ಪಡೆಯಲಾಗಿತ್ತೋ ಅಥವಾ ಕಡಿತ ಮಾಡಲಾಗಿತ್ತೋ ಎಂಬ ಬಗ್ಗೆ ನಾನು ತಿಳಿದುಕೊಂಡೆ. ಆ ಸ್ವತ್ತು ನಾಗಣ್ಣರವರ ಹೆಸರಿನಲ್ಲಿ ಇತ್ತು.

ವಾದಿ ಮತ್ತು ಆಕೆಯ ತಾಯಿಯು ಈ ದಾವೆಯಲ್ಲಿ ನನಗೆ ನೋಟೀಸು ಬಂದ ನಂತರ ಪರಿಚಯವಿರುತ್ತಾರೆ.

ಈ ದಾವೆ ಹೂಡುವ ಮೊದಲು ನಾನು ವಕೀಲರ ಮೂಲಕ ಕೆವಿಯೇಟ್ ಅರ್ಜಿ ಸಲ್ಲಿಸಿದ್ದೆ. ಸದರಿ ಕವಿಯೇಟ್ ನಲ್ಲಿ ನೋಟೀಸು ಜಾರಿ ಮಾಡಿರುವ ಪಕ್ಷಕಾರರು ಈ ದಾವೆಯ ವಾದಿ ಮತ್ತು ಆಕೆಯ ತಾಯಿಯಾಗಿದ್ದಾರೆ. ನಾನು ಕ್ರಯಕ್ಕೆ ಪಡೆದಿರುವ ನಿವೇಶನವು ಶಾಂತಿ ನಗರದ ಐ ಬಿ ಯ ಸಮೀಪ ಇದೆ ಎಂದರೆ ಸರಿ. ನಿಶಾನೆ ಡಿ 10 ಮತ್ತು 11 ರಲ್ಲಿ ನಮೂದು ಮಾಡಿರುವ ವಿಳಾಸವನ್ನು ನಾನೇ ನೀಡಿದ್ದೇನೆ ಎಂದರೆ ಸರಿ. ಸದರಿ ವಿಳಾಸದಿಂದ ನನಗೆ ನೋಟೀಸು ಕಳುಹಿಸಿದ ಕಾರಣ ನಾನು ಅದೇ ವಿಳಾಸಕ್ಕೆ ನೋಟೀಸನ್ನು ಕಳುಹಿಸಿದೆ. ನನ್ನ ವಕೀಲರಿಗೆ ಮಾಹಿತಿ ನೀಡುವ ಮುನ್ನ ಸದರಿ ವಿಳಾಸವು ಸರಿಯೋ ತಪ್ಪೋ ಎಂದು ನಾನು ವಿಚಾರ ಮಾಡಿದೆ. ವಾದಿ ಮತ್ತು ಆಕೆಯ ತಾಯಿ ಮುನಿಸಿಪಾಲಿಟಿಯವರಿಗೆ ನೀಡಿರುವ ತಕರಾರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ನಿಶಾನೆ ಡಿ 10 ಮತ್ತು 11 ರಲ್ಲಿ ಇರುವ ವಿಳಾಸದಲ್ಲಿ ವಾದಿ ಮತ್ತು ಆಕೆಯ ತಾಯಿ ವಾಸವಿದ್ದಾರೆ ಎಂಬುದನ್ನು ತಿಳಿದುಕೊಂಡೆ, ನಾನು ವಕೀಲರ ಮೂಲಕ ಕೆವಿಯೇಟ್ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ನಾನು ಸ್ವತ್ತನ್ನು ಕ್ರಯಕ್ಕೆ ಪಡೆಯುವ ಮೊದಲು ದಿವಾಕರ ಮತ್ತು ಆತನ ತಾತನನ್ನು ವಿಚಾರ ಮಾಡಿದೆ. ಜಯರಾಮೇಗೌಡ ಎಂಬುವವರು ದಕ್ಷಿಣಕ್ಕೆ ಇದ್ದಾರೆ. ನನಗೂ ಮತ್ತು ಅವರಿಗೆ ಯಾವುದೇ ವೈಮನಸ್ಸು ಇಲ್ಲ. ನಮ್ಮ ನಿವೇಶನದ ನಂತರ ಪೂರ್ವಕ್ಕೆ ಬಸವರಾಜುರವರು ಇದ್ದು ಅವರ ಪೂರ್ವಕ್ಕೆ ದಿವಾಕರ ಇದ್ದಾರೆ. ನಾನು

ಜಯರಾಮೇಗೌಡರನ್ನು ವಿಚಾರಣೆ ಮಾಡಲಿಲ್ಲ. ನಾನು ಯಾರನ್ನೂ ವಿಚಾರಿಸದೆ ಸದರಿ ಸ್ವತ್ತಿನಲ್ಲಿ ಇರುವ ವಾಸದ ಮನೆಯಲ್ಲಿ ವಾದಿ ಮತ್ತು ಆಕೆಯ ತಾಯಿ ವಾಸವಿರುವ ಸಂಗತಿ ನನಗೆ ಗೊತ್ತಿದ್ದರೂ ಸಹ ದುಂಡಾವರ್ತಿಯಿಂದ ಅವರನ್ನು ಖಾಲಿ ಮಾಡಿಸಿ ಮನೆಯನ್ನು ಕೆಡವಿ ನಿವೇಶನ ಮಾಡಿಕೊಳ್ಳಬೇಕೆಂಬ ದುರುದ್ದೇಶದಿಂದ ನಾನು ಕ್ರಯಪತ್ರ ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಡಿ 1 ರಲ್ಲಿನ ಅರ್ಜಿಗೆ ಸಂಬಂಧಿಸಿದಂತೆ ನಾನು ಸುಮಾರು 6 ತಿಂಗಳ ಹಿಂದೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದವರಿಗೆ ಅರ್ಜಿ ನೀಡಿದ್ದೆ. ಈಗಲೂ ಸಹ ಕೆ ಇ ಬಿ ಯಲ್ಲಿ ಪಾರ್ವತಿ ಕೋಂ ನಾಗಣ್ಣ ಎಂದು ಇದೆ ಎಂದರೆ ಸರಿ. ನಾನು ಹಾಗೂ ಇತರೆ ಪ್ರತಿವಾದಿಗಳು ಸೇರಿ ಕೆ ಇ ಬಿ ಯಲ್ಲಿ ನಿಶಾನೆ ಡಿ 1 ರಲ್ಲಿನ ಅರ್ಜಿಯಲ್ಲಿ ನಾಗಣ್ಣ ಎಂಬ ಹೆಸರಿನ ಮುಂದೆ ಚಾರಿ ಎಂದು ತಿದ್ದಿದ್ದೇವೆ ಎಂದರೆ ಸರಿಯಲ್ಲ. ಈಗಲೂ ಸಹ ಕಂಪ್ಯೂಟರ್ ನಲ್ಲಿ ನಾಗಣ್ಣ ಎಂದು ಇದ್ದರೂ ಸಹ ಕೈ ಬರವಣಿಗೆಯಲ್ಲಿ ನಾಗಣ್ಣಚಾರಿ ಎಂದು ಮಾಡಿದ್ದೇವೆ ಎಂದರೆ ಸರಿಯಲ್ಲ. ವಾದಿಯು ಮೃತ ನಾಗಣ್ಣರವರ ಮಗಳಾಗಿದ್ದು ಆಕೆ ಮತ್ತು ಆಕೆಯ ತಾಯಿ ದಾವಾ ಆಸ್ತಿ ಮನೆಯಲ್ಲಿ ವಾಸವಿರುವ ಸಂಗತಿ ನನಗೆ ಗೊತ್ತಿದ್ದರೂ ಸಹ ಹೇಗಾದರೂ ಮಾಡಿ ಆ ಸ್ವತ್ತನ್ನು ಕಬಳಿಸಬೇಕೆಂಬ ದುರುದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಿಶ್ವನಾಥ ಎಂಬುವವರ ಹೆಂಡತಿ ಭಾರತಿ ನನಗೆ ಪರಿಚಯವಿಲ್ಲ. ಈ ದಾವೆ ಹೂಡುವುದಕ್ಕಿಂತ ಮೊದಲೇ 7 ನೇ ಪ್ರತಿವಾದಿಯಿಂದ ಹಕ್ಕು ಖುಲಾಸೆ ಪತ್ರ ಬರೆಸಿಕೊಂಡಿದ್ದೆ. ದಾವಾ ಆಸ್ತಿಯು ವಾದಿ ಮತ್ತು ಆಕೆಯ ತಾಯಿಗೆ ಸೇರಿದೆ ಎಂಬ ಸಂಗತಿ 7 ನೇ ಪ್ರತಿವಾದಿಗೆ ಗೊತ್ತಾದ ನಂತರ ಆತನು ಅವರೊಂದಿಗೆ ಹೊಡೆದಾಡಲು ಆಗುವುದಿಲ್ಲ ಎಂಬ ಕಾರಣದಿಂದ ನನ್ನೊಂದಿಗೆ ಷರೀಕ್ಕಾಗಿ ಹೇಗಾದರೂ ಮಾಡಿ ಆಸ್ತಿಯನ್ನು ಕಬಳಿಸಬೇಕೆಂಬ ಉದ್ದೇಶದಿಂದ ಸುಳ್ಳು ಹಕ್ಕು ಖುಲಾಸೆ ಪತ್ರ ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಈಗಲೂ ಸಹ ದಾವಾ ಆಸ್ತಿಯು ವಾದಿ, ಆಕೆಯ

ತಾಯಿ ಪಾರ್ವತಿ ಹಾಗೂ 1 ರಿಂದ 5 ನೇ ಪ್ರತಿವಾದಿಗಳ ಮಾಲೀಕತ್ವ ಮತ್ತು ಜಂಟಿ ಸ್ವಾಧೀನಾನುಭವದಲ್ಲಿದ್ದರೂ ಸಹ ನಾನು ಯಾವುದೇ ಕ್ರಯದ ಮೊಬಲಗನ್ನು ಪಾವತಿ ಮಾಡದೆ 1 ರಿಂದ 5 ನೇ ಪ್ರತಿವಾದಿಗಳಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ದಾಖಲೆಯನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣದಿಂದಲೇ ಕಾನೂನಿನಲ್ಲಿ ಅವಕಾಶ ಇಲ್ಲದೆ ಇದ್ದರೂ ಸಹ ಅಷ್ಟು ಹಣವನ್ನು ನಗದು ರೂಪದಲ್ಲಿ ನೀಡಿದ್ದೇನೆ ಎಂದು ಬರೆಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**